# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 110/2017

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | Charles | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ | ಲೇಟ್ ಡಿ.ಪಿ.ರಾಜು | 07.01.2026 | |
| ವಯಸ್ಸು | ಃ | 65 ವರ್ಷ | | |
| ವೃತ್ತಿ | ಃ | ನಿವೃತ್ತ ಹಿರಿಯ ಮೋಟಾರು ವಾಹನ ನಿರೀಕ್ಷಕರು | ಪ್ರಾ.ಸಾ. ಃ | 41 |
| ವಾಸಸ್ಥಳ | ಃ | ಮೈಸೂರು | ಚಾ.ಸಾ. ಃ | 67 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು *2009* ರಿಂದ *2020* ರವರೆಗೆ ಹಿರಿಯ ವಾಹನ ಮೋಟಾರು ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ *02.01.2017* ರಂದು ವಿವಿ ಪುರಂ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್ ಅವರಿಂದ ಬಂದ ಮನವಿ ಮೇರೆಗೆ ಅದೇ ದಿನ ಸಂಜೆ *5.00* ಗಂಟೆಗೆ ಪೊಲೀಸ್ ಠಾಣೆಯ ಆವರಣದಲ್ಲಿ ಇದ್ದ ವಾಹನ ಸಂಖ್ಯೆ ಕೆಎ-ಎಂಜಿ-*3000* ಮತ್ತು ದ್ವಿಚಕ್ರ ವಾಹನ ಸಂಖ್ಯೆಕೆಎ-*09*-ಹೆಚ್‌ಬಿ *2770* ವಾಹನಗಳನ್ನು ಪರಿಶೀಲಿಸಿ ಆ ವಾಹನಗಳಿಗೆ ಆಗಿದ್ದ ಜಖಂಗಳನ್ನು ವಿವರವಾಗಿ ನನ್ನ ವರದಿಯಲ್ಲಿ ತಿಳಿಸಿರುತ್ತೇನೆ.

ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ**-*132* ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ**-*132(ಎ)* ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದಃ</u>

ಕಾರಿನ ಮುಂಭಾಗದ ಬ್ಯಾನೆಟ್ ನ ಡೆಂಟ್ ಆದಂತಹ ಭಾಗದಲ್ಲಿ ಪೇಂಟ್ ಕಿತ್ತುಬಂದಿರಲಿಲ್ಲ. ನಿಪಿ-*132* ರಲ್ಲಿ ಬ್ಯಾನೆಟ್ ನ ನಿರ್ದಿಷ್ಟವಾಗಿ ಯಾವ ಭಾಗ ಎಂದು ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ಕಾರಿನ ಯಾವುದೇ ಭಾಗದ ಪೇಂಟ್ ಹೋಂಡಾ ಆಕ್ಟಿವಾ ಕ್ಕೆ ಅಂಟಿರಲಿಲ್ಲ. ನಾನು ಹೇಳಿದಂತೆ ಪೊಲೀಸ್ ಠಾಣೆಯ ಆವರಣಕ್ಕೆ ಹೋಗಿಲ್ಲ, ವಾಹನಗಳನ್ನು ಪರೀಕ್ಷೆ ಮಾಡಿಲ್ಲ, ತನಿಖಾಧಿಕಾರಿಯವರ ಕೋರಿಕೆಯ ಮೇರೆಗೆ ನಿಪಿ-*132* ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ನಿರ್ದಿಷ್ಟವಾದ ಫಾರಂಗಳಡಿಯಲ್ಲಿ ಯಾವುದೇ ವಾಹನದ ಜಖಂಗಳನ್ನು ನಿರ್ದಿಷ್ಟವಾಗಿ ನೀಡಬೇಕು ಎಂದರೆ ಸರಿಯಲ್ಲ. ಅಪಘಾತ ಪ್ರಕರಣಗಳಲ್ಲಿ ಫಾರಂಗಳಡಿಯಲ್ಲಿ ನೀಡುತ್ತೇವೆ ಬೇರೆ ಪ್ರಕರಣಗಳಲ್ಲಿ ***general format*** ನಲ್ಲಿ ನೀಡುತ್ತೇವೆ. ನಾನು ಯಾವುದೇ ವಾಹನವನ್ನು ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು